**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಬೇಲೂರು.**

**ಸಿಸಿ 714/2016**

| | | |
|---|---|---|
| **ಹೆಸರು** | **ಹೆಚ್ ಸುಬ್ಬಯ್ಯ** | **ದಿಃ 21-10-2022** |
| **ತಂದೆ ಹೆಸರು** | **ಹುಚ್ಚಯ್ಯ** | |
| **ವಯಸ್ಸು** | **54 ವರ್ಷ** | **ಪಿಡಬ್ಲುಃ 13** |
| **ಉದ್ಯೋಗ** | **ಪಿ ಎಸ್ ಐ ಹಿರಿಸಾವೆ ಠಾಣೆ** | **ಸಿಡಬ್ಲು 13** |
| **ವಾಸ** | **ಹಿರಿಸಾವೆ** | **ವಿಧಿ ಬದ್ದವಾಗಿ ಪ್ರಮಾಣೀಕರಿಸಲಾಯ್ತು** |

**ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ರವರಿಂದ**

**ನಾನು ಹಳೇಬೀಡು ಪೋಲೀಸ್ ಠಾಣೆಯಲ್ಲಿ ದಿಃ17.08.2015 ರಿಂದ ದಿಃ 26.12.2016 ರವರೆಗೆ ಪಿಎಸ್‌ಐ ಆಗಿ** ಕರ್ತವ್ಯ ನಿರ್ವಹಿಸಿ ರುತ್ತೇನೆ.

ದಿಃ 27-10-2015 ರಂದು ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದು ಠಾಣಾ ಮೊ. ನಂ. 210/2015 ರಂದು ಪ್ರವವ ವನ್ನು ತಯಾರಿಸಿ ಪ್ರತಿಯನ್ನು ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿಃ 28-10-2015 ರಂದು ಪಂಚರಾದ ಚಾಸಾ- 1, ಚಾಸಾ-7 ಮತ್ತು 8 ರವರ ಸಮಕ್ಷಮ ಕೃತ್ಯ ಸ್ಥಳ ದ ಮಹಜರ್ ನ್ನು ಮಧ್ಯಾಹ್ನ 12ಃ30 ರಿಂದ 1ಃ30 ರವರೆಗೆ ಜರುಗಿಸಲಾಯಿತು.

ದಿಃ 28-10-2015 ರಂದು ಪಿರ್ಯಾದಿಯವರ ಮರುಹೇಳಿಕೆಯನ್ನು ಪಡೆದಿರುತ್ತೇನೆ. ದಿಃ 30-10-2015 ರಂದು ಚಾಸಾ- 3 ರಿಂದ 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 19-03-2016 ರಂದು ಈ ಕೇಸಿನಲ್ಲಿ ಅಮಾನತ್ತುಪಡಿಸಿಕೊಂಡಿದ್ದ ತೆಂಗಿನ ಕಾಯಿಯನ್ನು ಬೆಳಗ್ಗೆ 10ಃ00 ರಿಂದ 11ಃ00 ಗಂಟೆ ವರೆಗೆ ಮಹಜರ್ ಮೂಲಕ ಚಾಸಾ-1 ಮತ್ತು 11 ರವರ ಸಮಕ್ಷಮ ಮಹಜರ್ ಮಾಡಿ ಬಿಡುಗಡೆ ಮಾಡಿರುತ್ತೇನೆ. ದಿಃ 20-03-2016 ರಂದು ಆರೋಪಿತರ ಮೇಲೆ ಆರೋಪ ಸಾಬೀತಾದ ಕಾರಣ ಘನ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

ಸಾಕ್ಷಿಯು ದೂರನ್ನು ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರ್ತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರ್ತಿಸಲಾಯಿತು.

ಪ್ರವವ ವನ್ನು ಸಾಕ್ಷಿ ನೋಡಿ ಗುರ್ತಿಸಿದ್ದು ಅದನ್ನು ನಿಪಿ-10 ಎಂದು ಸಾಕ್ಷಿ ಸಹಿಯನ್ನು ನಿಪಿ-10(ಎ) ಎಂದು ಗುರ್ತಿಸಲಾಯಿತು.

ಸಾಕ್ಷಿಯು ಕೃತ್ಯ ಸ್ಥಳ ಮಹಜರ್ ನ್ನು ನೋಡಿ ಗುರ್ತಿಸಿದ್ದು ಸದನ್ನು ಈಗಾಗಲೇ ನಿಪಿ-2 ಎಂದು ಗುರ್ತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-2(ಡಿ) ಎಂದು ಗುರ್ತಿಸಲಾಯಿತು.

ಸಾಕ್ಷಿಯು ತೆಂಗಿನ ಕಾಯಿ ಬಿಡುಗಡೆ ಮಹಜರ್ ನ್ನು ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರ್ತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-3(ಸಿ) ಎಂದು ಗುರ್ತಿಸಲಾಯಿತು.

ಚಾಸಾ-2 ರವರ ಹೇಳಿಕೆಯನ್ನು ಈಗಾಗಲೇ ನಿಪಿ-7 ಎಂದು ಗುರ್ತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು ಗುರ್ತಿಸಲಾಯಿತು.

ಚಾಸಾ-6 ರವರ ಹೇಳಿಕೆಯನ್ನು ಈಗಾಗಲೇ ನಿಪಿ-8 ಎಂದು ಗುರ್ತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರ್ತಿಸಲಾಯಿತು.

ಸಾಕ್ಷಿಯು ತೆಂಗಿನಕಾಯಿಗಳು ಇರುವ ಫೋಟೋಗಳನ್ನು ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ-4 ಮತ್ತು 5 ಎಂದು ಗುರ್ತಿಸಲಾಗಿದೆ.

**ಃಃಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಬಿ ಎಸ್ ಜಿ ರವರಿಂದಃಃ**

ಈ ಪ್ರಕರಣದ ದೂರನ್ನು ಸ್ವೀಕರಿಸಿದ ದಿನವೇ ಆರೋಪಿತರು ಚಾಸಾ-1, 3, 4 ಬುದ್ದಿ ಸಾಗರ ಮತ್ತು ಗೀತಾ ಎಂಬುವವರ ವಿರುದ್ದ ಎಸ್.ಸಿ ಎಸ್.ಟಿ ದೌರ್ಜನ್ಯ ತಡೆ ಕಾಯ್ದೆ ಯಡಿಯಲ್ಲಿ ದೂರನ್ನು ಸಿ ಆರ್ 211/2015 ಎಂದು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ಎರಡು ಪ್ರಕರಣಗಳನ್ನು ನನ್ನ ಉಪಸ್ಥಿತಿಯಲ್ಲಿ ಠಾಣೆಯಲ್ಲೇ ದಾಖಲು ಮಾಡಿಕೊಂಡಂತ ದೂರುಗಳಾಗಿರುತ್ತವೆ ಎಂದರೆ ಸರಿ. ಜಾಮೀನು ರಹಿತ ಆರೋಪಿಗಳನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಮಾಡಬೇಕಾಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಪ್ರಕರಣಕ್ಕೆ ಸಂಬಂಧಿಸಿದ ಕಡತವನ್ನು ಪರಿಶೀಲನೆ ಮಾಡಿ ಚಾಸಾ-1 ರವರು 10ಃ00 ಗಂಟೆಗೆ ದೂರು ನೀಡಿರುತ್ತಾರೆ. ಆರೋಪಿಗಳು ಚಾಸಾ-1 ಮತ್ತು ಇತರರ ವಿರುದ್ದ 11ಃ00 ಗಂಟೆಗೆ ದೂರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಆರೋಪಿ ರವಿಚಂದ್ರ ನೀಡಿದ ದೂರನ್ನು ನಾನು 11ಃ00 ಗಂಟೆಗೆ ದಾಖಲಿಸಿರುತ್ತೇನೆ. ಜಾಮೀನು ರಹಿತ ಆರೋಪಿಗಳನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಮಾಡಬೇಕಾಗಿರುತ್ತದೆ ಎಂದರೆ ಸಾಕ್ಷಿಯು 2 ನೇ ದೂರನ್ನು ಆರೋಪಿ ದಾಖಲಿಸಿದಾಗ ಚಾಸಾ-1 ರವರು ಠಾಣೆಯಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ 2 ನೇ ದೂರು ದಾಖಲಾದ ಬಗ್ಗೆ ನನಗೆ ಮಾಹಿತಿ ಇತ್ತು.

2.ಃ ನಾನು ಕೃತ್ಯಸ್ಥಳಕ್ಕೆ ದಿಃ 28-10-2015 ರಂದು ಹೋಗಿರುತ್ತೇನೆ. ಆ ದಿನ ಚಾಸಾ-1 ರವರ ಸಹಿಯನ್ನು ನಿಪಿ-2 ಕ್ಕೆ ಸಹಿಯನ್ನು ಪಡೆದಿರುತ್ತೇನೆ. ಆ ಸಮಯದಲ್ಲಿ ಚಾಸಾ-1 ರವರನ್ನು ದಸ್ತಗಿರಿ ಏಕೆ

ಮಾಡಲಿಲ್ಲ ಎಂದರೆ ಸಾಕ್ಷಿಯು ಎಸ್.ಸಿ ಎಸ್.ಟಿ ದೌರ್ಜನ್ಯ ತಡೆ ಕಾಯ್ದೆ ಯಡಿ ಡಿವೈ ಎಸ್ ಪಿ ರವರು ಅಧಿಕಾರಿಗಳಾದ ಕಾರಣ ನನಗೆ ಯಾವುದೇ ನಿರ್ದೇಶನ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ಚಾಸಾ-1 ರವರು ಆರೋಪಿಯಾದ ಕಾರಣ ಅವರು ಕೃತ್ಯ ಸ್ಥಳ ಮಹಜರ್ ಸಮಯದಲ್ಲಿ ಹಾಜರಿರುತ್ತಾರೆ ಅವರನ್ನು ದಸ್ತಗಿರಿ ಮಾಡಬೇಕೆ ಬೇಡವೇ ಎಂದು ನಾನು ಮೇಲಧಿಕಾರಿಗಳಿಗೆ ತಿಳಿಸಿರುತ್ತೇನೆ. ಅದಕ್ಕೆ ಮೇಲಧಿಕಾರಿಗಳು ತಾನು ತನಿಖಾಧಿಕಾರಿಯಾದ ಕಾರಣ ಮುಂದಿನ ಕ್ರಮ ನಾನೇ ತೆಗೆದುಕೊಳ್ಳುತ್ತೇನೆ ಎಂದು ನನಗೆ ತಿಳಿಸಿರುತ್ತಾರೆ. ನಾನು ನನ್ನ ಹಿರಿಯ ಅಧಿಕಾರಿಗೆ ಮೌಖಿಕವಾಗಿ ತಿಳಿಸಿರುತ್ತೇನೆ, ಬರವಣಿಗೆಯಲ್ಲಿ ತಿಳಿಸಿರುವುದಿಲ್ಲ.

**3.**ಃ ಚಾಸಾ-1, 3 ಮತ್ತು 4 ರವರ ಹೇಳಿಕೆಯನ್ನು ತೆಗೆದುಕೊಳ್ಳುವ ಸಮಯದಲ್ಲಿ ಅವರನ್ನು ದಸ್ತಗಿರಿ ಮಾಡಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ತನಿಖಾಧಿಕಾರಿಯಾದ ಡಿವೈಎಸ್ ಪಿ ರವರು ನನಗೆ ಯಾವುದೇ ನಿರ್ದೇಶನ ನೀಡಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಅಟ್ರಾಸಿಟಿ ಕೇಸಿಗೆ ಸಂಬಂಧಿಸಿದಂತೆ ಕಡತವನ್ನು ಹಿರಿಯ ಅಧಿಕಾರಿಗೆ ನಿವೇದಿಸಿಕೊಳ್ಳುವವರೆಗೂ ಸಂಪೂರ್ಣ ಅಧಿಕಾರ ನನಗೆ ಇರುತ್ತದೆ ಎಂದರೆ ಸರಿಯಲ್ಲ. ಚಾಸಾ-1, 3 ಮತ್ತು 4 ರವರನ್ನು ದಸ್ತಗಿರಿ ಮಾಡದೇ ಈ ಆರೋಪಿತರ ವಿರುದ್ದ ಸುಳ್ಳು ದೂರು ದಾಖಲಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**4.**ಃ ಕೃತ್ಯ ಸ್ಥಳ ಮಹಜರ್ ಮಾಡುವ ಪೂರ್ವದಲ್ಲಿ ಪಂಚರಿಗೆ ಲಿಖಿತ ನೋಟೀಸ್ ನೀಡಿರುವುದಿಲ್ಲ, ಮೌಖಿಕವಾಗಿ ತಿಳಿಸಿರುತ್ತೇನೆ. ಕೃತ್ಯ ಸ್ಥಳದ ಮಾಲೀಕರು ಈ ಪ್ರಕರಣದ ಪಿರ್ಯಾದುದಾರ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ಕೃತ್ಯ ಸ್ಥಳ ಯಾವ ರೀತಿಯ ಜಾಗ ಇರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಕೃತ್ಯ ಸ್ಥಳಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆ ಕಂದಾಯ ರಶೀದಿ ವಗೈರೆ ದಾಖಲೆಗಳನ್ನು ಪಡೆದುಕೊಳ್ಳಲು ತೊಂದರೆ ಇರಲಿಲ್ಲ. ಸದರಿ ಸ್ಥಳದ ಮಾಲೀಕರು ಯಾರು ಇರುತ್ತಾರೆ ಎಂಬ ಬಗ್ಗೆ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ. ಅಮಾನತ್ತುಮಾಡಿದ ಗೋಣೀಚೀಲಗಳು ನ್ಯಾಯಾಲಯದ ಮುಂದೆ ಇರುವುದಿಲ್ಲ ಎಂದರೆ ಸರಿ. ಯಾವುದೇ ಬೈಕ್ ನ್ನು ಅಮಾನತ್ತುಮಾಡಿರುವುದಿಲ್ಲ. ದೂರಿನಲ್ಲಿ ಕೃತ್ಯ ಸ್ಥಳದ ಬಗ್ಗೆ ನಮೂದು ಮಾಡಿರುವುದಿಲ್ಲ. ಒಂದು ಗೋಣೀಚೀಲಕ್ಕೆ 15 ರಿಂದ 20 ಸಿಪ್ಪೆ ಕಾಯಿಗಳನ್ನು ತುಂಬಲು ಸಾಧ್ಯ ಎಂದರೆ ಇರಬಹುದು. ಬೈಕ್ ನಲ್ಲಿ ಚಾಲಕ ಮತ್ತು ಹಿಂಬದಿಸವಾರನಿಗೆ ಮಾತ್ರ ಅವಕಾಶ ಇರುತ್ತದೆ

ಎಂದರೆ ಸರಿ. ಎರಡು ಚೀಲ ತೆಂಗಿನಕಾಯಿಗಳನ್ನು ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು ಆರೋಪಿಗಳು ಯಾವ ರೀತಿ ಅದನ್ನು ಇಟ್ಟುಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತೆಂಗಿನಕಾಯಿಗಳಿಗೆ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುವುದಿಲ್ಲ. ಒಂದು ಚೀಲದಲ್ಲಿ **42** ಇನ್ನೊಂದು ಚೀಲದಲ್ಲಿ **48** ತೆಂಗಿನ ಕಾಯಿಗಳು ಇದ್ದವು ಎಂದು ತಿಳಿಸಿದ್ದು ಯಾವ ಯಾವ ಚೀಲಗಳು ಎಂದು ಅವು ನ್ಯಾಯಾಲಯದ ಮುಂದೆ ಇರುವುದಿಲ್ಲ.

**5.**ಃ ಚಾಸಾ-**1** ರವರು ಯಾವುದೇ ಮರುಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಿಃ **30-10-2015** ರಂದು ಚಾಸಾ-**3** ಮತ್ತು **4** ರವರು ನನ್ನ ಸಮಕ್ಷಮ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. **2** ತಿಂಗಳು **8** ದಿನದ ನಂತರ ತೆಂಗಿನ ಕಾಯಿಯನ್ನು ಅಮಾನತ್ತುಪಡಿಸಿರುತ್ತಾರೆ ಎಂದರೆ ಸಾಕ್ಷಿಯು ಆರೋಪಿ ಜಾಮೀನು ಪಡೆದ ನಂತರ ಅಮಾನತ್ತುಪಡಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಆರೋಪಿತರು ಯಾವಾಗ ಜಾಮೀನು ಪಡೆದಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ದಿಃ **19-03-2016** ರಂದು ತೆಂಗಿನ ಕಾಯಿಯನ್ನು ಬಿಡುಗಡೆ ಮಾಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಕೃತ್ಯ ಸ್ಥಳ ಮಹಜರ್ ಮಾಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-**1** ಷರೀಕಾಗಿ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತೆಂಗಿನ ಕಾಯಿ ಕಳ್ಳತನ ಮಾಡದಿದ್ದರೂ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿಕೊಂಡು ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. **3** ಮತ್ತು **4** ನೇ ಆರೋಪಿತರು ಅಟ್ರಾಸಿಟಿ ಕೇಸನ್ನು ದಾಖಲಿಸದಿದ್ದರೆ ನನಗೆ ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದು ದೂರನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣ ದಾಖಲಿಸಿಕೊಂಡು ಸುಳ್ಳು ದೊಷಾರೋಪಣಾ ಪಟ್ಟಿ ಸಲ್ಲಿಸಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಮಾನತ್ತುಪಡಿಸಿಕೊಂಡೆ ಎಂದು ಹೇಳುವ ತೆಂಗಿನ ಕಾಯಿಗಳಿಗೂ ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ**

**(ಪ್ರಸನ್ನಕುಮಾರ್ ಪಿ.)**
**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ಬೇಲೂರು.**

Case called again.

Accused No.1 present.

CW-1 and 2 are present. They are examined as PW-1 and 2 respectively. Ex.P-1 to P-3, P-1(a), P-2(a) are marked.

The said material witnesses found to be turned hostile.

The Learned APP seeks to issue Summons to other witnesses. Since the material witnesses turned hostile, no purpose will be served if the summons is issued to other witnesses.

Hence, prayer of Learned APP is rejected.

The statement of accused U.s 313 of CrPC is also hereby dispensed.

A memo is filed by the Counsel for the accused No.1 to 6 stating that the earlier surety bond executed by them may be considered as bond executed towards compliance of provisions of sec. 437-A of CrPC.

Heard arguments.

For Judgment by: 27-12-2021

**Civil Judge and JMFC, Belur.**